ಗುಲ್ಬರ್ಗ ವಿಭಾಗದ ಗುಲ್ಬರ್ಗ ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಹೆಚ್ಚುತ್ತಿರುವ ಉಷ್ಣಾಂಶ ತಡೆಯಲು ವಿಶೇಷ ಕಾರ್ಯಕ್ರಮ ತೆಗೆದುಕೊಂಡು ಅರಣ್ಯ ಹಾಗೂ ಹೆಚ್ಚಿನ ಗಿಡಗಳನ್ನು ಬೆಳೆಸುವ ವಿಶೇಷ ಕಾರ್ಯಕ್ರಮ ರೂಪಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಜಿ. ಎಸ್. ಬಾಗಲ್‌ಕೋಟ್ (ಅರಣ್ಯ ಸಚಿವರು).—

ಗುಲ್ಬರ್ಗಾ ವಿಭಾಗದ ಗುಲ್ಬರ್ಗ, ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಹೆಚ್ಚುತ್ತಿರುವ ಉಷ್ಣಾಂಶ ತಡೆಯಲು ವಿಶೇಷವಾದ ಕಾರ್ಯಕ್ರಮಗಳನ್ನು ಅರಣ್ಯ ಹಾಗೂ ಗ್ರಾಮಾಣಾಭಿವೃದ್ಧಿ ಯೋಜನೆಗಳಲ್ಲಿ ಅಳವಡಿಸಿಕೊಂಡು ಹೆಚ್ಚಿನ ಪ್ರಮಾಣದಲ್ಲಿ ಗಿಡಗಳನ್ನು ಬೆಳೆಸಲಾಗುತ್ತಿದೆ. ೧೯೮೭ರ ಮಳೆಗಾಲದಲ್ಲಿ ಗುಲ್ಬರ್ಗಾ ವಿಭಾಗದಲ್ಲಿ ೫,೦೦೦ ಹೆಕ್ಟೇರಿಗೂ ಮೇಲ್ಪಟ್ಟ ವಿಸ್ತೀರ್ಣದಲ್ಲಿ ಅರಣ್ಯಗಳನ್ನು ಬೆಳೆಸಲಾಗಿದೆ. ಇದಲ್ಲದೆ ಸುಮಾರು ೧೩೦ ಲಕ್ಷ ಸಸಿಗಳನ್ನು ರೈತರಿಗೆ ಪುಕ್ಕಟೆಯಾಗಿ ಹಂಚಲಾಗಿದೆ.

೧೯೮೮ನೇ ಮಳೆಗಾಲದಲ್ಲೂ ಸಹ ಸುಮಾರು ೫,೦೦೦ ಹೆಕ್ಟೇರ್ ವಿಸ್ತೀರ್ಣದಲ್ಲಿ ಅರಣ್ಯ ಬೆಳೆಸಲಾಗುತ್ತಿದೆ ಹಾಗೂ ಸುಮಾರು ೨೦೦ ಲಕ್ಷ ಸಸಿಗಳನ್ನು ರೈತರಿಗೆ ಪುಕ್ಕಟೆಯಾಗಿ ಹಂಚಲಾಗುತ್ತಿದೆ.

ಗುಲ್ಬರ್ಗಾ ವಿಭಾಗ ಸೇರಿದಂತೆ ರಾಜ್ಯದಲ್ಲಿ ಬರಗಾಲಪೀಡಿತ ಪ್ರದೇಶಗಳಲ್ಲಿ ತೀವ್ರವಾದ ಅರಣ್ಯ ಬೆಳವಣಿಗೆ ತೆಗೆದುಕೊಳ್ಳಲು ಬಳವಲಯದ ಅರಣ್ಯಾಭಿವೃದ್ಧಿ ಯೋಜನೆ ಒಂದನ್ನು ರೂಪಿಸಲಾಗುತ್ತಿದೆ, ಈ ಯೋಜನೆಯನ್ನು ಕೇಂದ್ರ ಸರ್ಕಾರ ಅಥವಾ ವಿದೇಶಿ ರಾಷ್ಟ್ರಗಳ ಹಣ ಸಹಾಯಕ್ಕಾಗಿ ಕಳುಹಿಸಲು ರಾಜ್ಯ ಸರ್ಕಾರ ಯೋಚಿಸಿದೆ.

9. ರಾಜ್ಯದಲ್ಲಿ ತುರ್ತಾಗಿ ಉಪಾಧ್ಯಾಯರನ್ನು ನೇಮಕಾತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡುವುದರ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ೧೯೮೯ರಿಂದ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳು ಪ್ರಾರಂಭವಾಗಲಿವೆ. ೧೯೮೯ನೇ ಇಸವಿಯಲ್ಲಿ ಉಪಾಧ್ಯಾಯರ ನೇಮಕಗೊಳ್ಳಲಿಲ್ಲ. ೧೯೮೮ರಲ್ಲಿ ಈಗಿನವರೆಗೆ ನೇಮಕಾತಿ ಮಾಡಲಿಲ್ಲ. ಅನೇಕ ಸ್ಕೂಲುಗಳು ಉಪಾಧ್ಯಾಯರಿಲ್ಲದೆ ಪ್ರಾರಂಭವಾಗುವ ಸೂಚನೆಯಿಲ್ಲ ಕೋಲಾರ ಜಿಲ್ಲಾ ಪರಿಷತ್ತು ಕೂಡ ಕಾಂಟ್ರಾಕ್ಟ್ ಮೇಲೆ ಅಂದರೆ ಮೊದಲಿನ ೫೦ ರೂಪಾಯಿಗಳಂತೆ ನಿರುದ್ಯೋಗ ಟಿ.ಸಿ ಹೆಚ್. ಬಿ ಎಡ್. ಓದಿದವರನ್ನು ಕೆಲಸಕ್ಕೆ ತೆಗೆದುಕೊಳ್ಳಲು ತೀರ್ಮಾನಿಸಿ ಆದರೂ ಇನ್ನು ಕೆಲಸಕ್ಕೆ ತೆಗೆದುಕೊಂಡಿಲ್ಲ. ಸರ್ಕಾರ ಈ ವರ್ಷವೇ ತುರ್ತಾಗಿ ಉಪಾಧ್ಯಾಯರ ನೇಮಕಾತಿ ಮಾಡಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಅನುಮತಿ ನೀಡುವುದು ಅವಶ್ಯಕ. ತಕ್ಷಣ ಕ್ರಮ ಕೈಗೊಳ್ಳಲು ಹೋಗಿ ಹಳ್ಳಿಗಾಡಿನ ಬಡ ವಿದ್ಯಾರ್ಥಿಗಳ ನೆರವಿಗೆ ಬರಬೇಕೆಂದು ಕೋರಿ ಮಾನ್ಯ ವಿದ್ಯಾ ಮಂತ್ರಿಗಳ ಹೇಳಿಕೆ ಕೇಳುತ್ತೇನೆ.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಮಾಧ್ಯಮಿಕ ರಾಜ್ಯ ಶಿಕ್ಷಣ ಸಚಿವರು).—

ಪ್ರಾಥಮಿಕ ಶಿಕ್ಷಣವನ್ನು ಜಿಲ್ಲಾ ಪರಿಷತ್ ಆಡಳಿತ ವ್ಯಾಪ್ತಿಗೆ ತಂದ ತರುವಾಯ ಕೆಲವು ಜಿಲ್ಲಾ ಪರಿಷತ್ತುಗಳು ನೇಮಕಾತಿ ಸಂಬಂಧದಲ್ಲಿ ಕೆಲವು ಕಾನೂನಿನ ಸಮಸ್ಯೆ/ಸಂಶಯಗಳನ್ನು ವ್ಯಕ್ತಪಡಿಸಿ ಈ ಬಗ್ಗೆ ಸರ್ಕಾರದಿಂದ ಕೆಲವು ಸ್ಪಷ್ಟನೆ ಬಯಸಿದ್ದು ಸದರಿ ಸಮಸ್ಯೆ/ಸಂಶಯಗಳನ್ನೂ ಈಗ ನಿವಾರಿಸಲಾಗಿದೆ. ಈ ಮಧ್ಯೆ ಮಿತವ್ಯಯ ಆದೇಶ ಜಾರಿಯಲ್ಲಿದ್ದುದರಿಂದ ಖಾಲಿ ಇದ್ದ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯನ್ನು ಭರ್ತಿ ಮಾಡಲಾಗಲಿಲ್ಲ.

ಈಗ ಪ್ರಸ್ತುತ ಮಿತವ್ಯಯ ಆದೇಶ ಜಾರಿಯಲ್ಲಿ ಇದ್ದರೂ, ಶಿಕ್ಷಣ ಇಲಾಖೆಯಲ್ಲಿ ಅಧ್ಯಾಪಕರ ಕೊರತೆಯನ್ನು ಗಮನಿಸಿ, ಸರ್ಕಾರವು ಮಿತವ್ಯಯ ಆದೇಶದಿಂದ ವಿನಾಯ್ತಿ ನೀಡಿ ಖಾಲಿ ಇರುವ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಆದೇಶ ನೀಡಲಾಗಿದೆ.